ವಿವಿಧ ಸಮಸ್ಯೆಗಳನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಈ ಆಸ್ಪತ್ರೆಗಳ ಅಭಿವೃದ್ಧಿ ಬಗ್ಗೆ ಸರ್ಕಾರದ ಯೋಜನೆಗಳೇನು? ವಿವರ ಒದಗಿಸುವುದು:

ಡಾ: ಎ.ಬಿ.ಮಾಲಕರೆಡ್ಡಿ: (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಹೌದು.

ಆ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಮತ್ತು ಅವಶ್ಯಕತೆ ಇರುವಷ್ಟು ಉಪಕರಣಗಳನ್ನು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಮಕ್ಕಳ ಆಸ್ಪತ್ರೆಯಲ್ಲಿ ರ್‍ಯಾಂಪ್ (ಇಳಿಜಾರು ಮಾರ್ಗ) ಅನ್ನು ನಿರ್ಮಿಸಲಾಗಿದೆ.

ಇ) ೧) ಶಸ್ತ್ರ ಚಿಕಿತ್ಸಾ ಕೊಠಡಿಯನ್ನು ಹವಾನಿಯಂತ್ರಣಗೊಳಿಸುವುದು, ಡಯಾಲಿಸಿಸ್ ಯೂನಿಟ್, ಸುಟ್ಟಗಾಯಗಳ ವಾರ್ಡ್, ತೀವ್ರ ನಿಗಾ ಘಟಕ (ಐ.ಸಿ.ಯು) ಇವುಗಳನ್ನು ಸಹ ಹವಾನಿಯಂತ್ರಣಗೊಳಿಸುವುದು.

೨) ಡಯಾಲಿಸಿಸ್ ಯೂನಿಟ್ಟಿಗೆ ಹೆಚ್ಚುವರಿ ಡಯಾಲಿಸಿಸ್ ಉಪಕರಣಗಳನ್ನು ಮತ್ತು ಐ.ಸಿ.ಯು ಗೆ ವೆಂಟಿಲೇಟರ್‌ಗಳನ್ನು ಹೆಚ್ಚುವರಿಯಾಗಿ ಸರಬರಾಜು ಮಾಡುವುದು.

೩) ಕೋಬಾಲ್ಟ್ ಥೆರಪಿ ಯೂನಿಟ್ ಅನ್ನು ಸ್ಥಾಪಿಸುವುದು. ಚೆಲುವಾಂಬ ಮತ್ತು ಕೆ.ಆರ್.ಆಸ್ಪತ್ರೆಯ ನವೀಕರಣ.

ಕಡ್ಡಾಯ ಶಿಕ್ಷಣ ನೀತಿ ಅನುಷ್ಠಾನಗೊಳಿಸುವುದು.

೧೪೪೮(೧೬೭೭)

ಶ್ರೀ ವಿ.ಸೋಮಣ್ಣ(ಬಿನ್ನಿಪೇಟೆ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಡ್ಡಾಯ ಶಿಕ್ಷಣ ಕಾಯಿದೆ ಅಡಿಯಲ್ಲಿ ಕೊಳಚೆ ಪ್ರದೇಶಗಳಿಗೆ

ಸೀಮಿತವಾಗುವಂತೆ ಪ್ರತ್ಯೇಕ ಯೋಜನೆಯನ್ನು ಸರ್ಕಾರ ರೂಪಿಸುವುದರ ಮೂಲಕ ಉಚಿತ ಶಿಕ್ಷಣ ನೀತಿಯನ್ನು ಸರ್ಕಾರ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸುವುದೇ?

ಆ) ಹಾಗಿದ್ದಲ್ಲಿ ಅದರ ಪೂರ್ಣ ವಿವರ ಒದಗಿಸುವುದು.

ಶ್ರೀ ಹೆಚ್.ವಿಶ್ವನಾಥ್: (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾಯಿದೆ ಅಡಿಯಲ್ಲಿ ರಾಜ್ಯದ ಇತರ ಪ್ರದೇಶಗಳಿಗೆ ಅನ್ವಯವಾಗುವ ಕಡ್ಡಾಯ ಶಿಕ್ಷಣ ನೀತಿಯೇ ಕೊಳಚೆ ಪ್ರದೇಶಗಳಿಗೂ ಅನ್ವಯವಾಗುವುದರಿಂದ ಪ್ರತ್ಯೇಕ ಯೋಜನೆಯನ್ನು ಸರ್ಕಾರವು ರೂಪಿಸಿರುವುದಿಲ್ಲ. ಆದಾಗ್ಯೂ ಕೊಳಚೆ ಪ್ರದೇಶದ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸಂಚಾರಿ ಶಾಲೆಗಳ ಯೋಜನೆಯನ್ನು ಜಾರಿಗೆ ತರಲಾಗಿದ್ದು ಸಧ್ಯಕ್ಕೆ ಬೆಂಗಳೂರು ನಗರದ ಆಯ್ದ ಕೊಳಚೆ ಪ್ರದೇಶಗಳಲ್ಲಿ ಪ್ರಾಯೋಗಿಕವಾಗಿ ೪ ಸಂಚಾರಿ ಶಾಲೆಗಳನ್ನು ನಡೆಸಲಾಗುತ್ತಿದೆ.

ಆ) ಉದ್ಭವಿಸುವುದಿಲ್ಲ

ವ್ಯಾಸಂಗ ಮಾಡುವ ಎಸ್.ಸಿ./ಎಸ್.ಟಿ./ಬಿ.ಟಿ, ವಿದ್ಯಾರ್ಥಿಗಳಿಗೆ ಹೆಚ್ಚು ಹಣ ಬಿಡುಗಡೆ ಮಾಡುವುದು.

೧೪೪೯(೧೬೭೮)

ಶ್ರೀ ಸೋಮಣ್ಣ.ವಿ.(ಬಿನ್ನಿಪೇಟೆ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧. ಬೆಂಗಳೂರಿನ ಬಿ.ಎಂ.ಎಸ್. ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಎಸ್ಸಿ:ಎಸ್ಟಿ:ಬಿಟಿ ವಿದ್ಯಾರ್ಥಿಗಳಿಗೆ ೧೯೯೮ ರಿಂದ ೨೦೦೧ನೇ ಸಾಲಿನವರೆಗೆ ಶಿಕ್ಷಣ ನಿರ್ದೇಶನಾಲಯದಿಂದ ಸುಮಾರು ೩೦ ಲಕ್ಷಗಳಿಗೂ ಅಧಿಕ ಹಣವನ್ನು ಇದುವರೆವಿಗೂ ಬಿಡುಗಡೆ ಮಾಡದೇ ಇರುವುದರಿಂದ ಹಾಗೂ ಸುಮಾರು ೭ ಲಕ್ಷ ರೂ.ಗಳ ಬಿಲ್‌ಗೆ ಮೇಲು ರುಜು ಹಾಕುವಲ್ಲಿ ಮಾಡುತ್ತಿರುವ ವಿಳಂಬದಿಂದ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ, ಈ ಶಿಕ್ಷಣ ಸಂಸ್ಥೆಗೂ ಆರ್ಥಿಕ ಮುಗ್ಗಟ್ಟು ತಲೆದೋರಿರುವುದು ನಿಜವಲ್ಲವೆ?

೨. ಹಾಗಿದ್ದಲ್ಲಿ ಕೂಡಲೇ ಮೇಲ್ಕಂಡ ಮೊಬಲಗನ್ನು ಸರ್ಕಾರ ಬಿಡುಗಡೆ